



ಸಲೂನ್‌ಗೂ ಹೋಗ್ತಿದ್ದೆ. ಸಂಜೆ 5 ಗಂಟೆ ನಂತರ ನಾನು ಸ್ಟುಡಿಯೊಕ್ಕೆ ಹೋಗಿ ರಾತ್ರಿಯವರೆಗೆ ಕುಳಿತುಕೊಳ್ತಿದ್ದೆ'.

'ಹುಬ್ಬಳ್ಳಿಯಲ್ಲಿ, ಎಲ್ಲಿಯೂ ಒಂದೆಡೆ ಕುಳಿತು ಕಲೆಯ ಬಗ್ಗೆ ಚರ್ಚಿಸುವ ವಾತಾವರಣ ಇರಲಿಲ್ಲ. ನನ್ನ ಕ್ಲಾಸ್‌ಮೇಟ್‌ಗಳು ಸ್ನೇಹಿತರೆಲ್ಲ ಐಟಿ–ಬಿಟಿ ಕಂಪೆನಿ ಎಂದು ಬೆಂಗಳೂರು ಸೇರಿಕೊಂಡು ಕೈ ತುಂಬ ಸಂಬಳ ತಗೋತಿದ್ದರು. 'ಬೆಂಗಳೂರಿಗೆ ಬಾರೋ, ಅಲ್ಲೇನು ಮಾಡ್ತೀಯಾ?' ಅಂತ ಕರೆಯೋರು. ಆದರೆ, ನಾನು ನನ್ನ ಬ್ರದರ್‌ಗೆ ಪ್ರಾಮಿಸ್ ಮಾಡಿದ್ದೆ, ಹುಬ್ಬಳ್ಳಿ ಬಿಟ್ಟು, ಈ ಸಲೂನ್ ಕೆಲಸ ಬಿಟ್ಟು ಎಲ್ಲೂ ಹೋಗಲ್ಲ ಅಂತ'.

'ಮತ್ತಷ್ಟು ಸ್ಕೆಚ್, ಭಾವಚಿತ್ರ ಬರೆಯಲು ಶುರು ಮಾಡಿದೆ. ಜನ ನೋಡಿದವರು ಹೇಳೋರು, 'ಯಾರ‍್ಯಾರದ್ದೋ ಏನ್ ಮಾಡ್ತೀರಿ, ಪೇಂಟಿಂಗ್ಸ್ ಮಾಡಬೇಕ್ರಿ' ಅಂತ. ಒಂದು ಸಲ ಧಾರವಾಡದಲ್ಲಿ ಅಕಡೆಮಿಕ್ ಕ್ಯಾಂಪ್ ಆಯ್ತು. ನನ್ನ ಕೆಲವು ಭಾವಚಿತ್ರ ರಚನೆಯನ್ನು ತೆಗೆದುಕೊಂಡು ಹೋಗಿ ತೋರಿಸಿದೆ. ಆಗ ಅಕಾಡೆಮಿಯವರು ಇದು ಪೋರ್ಟ್ರೇಟ್ ಆಯ್ತು, ಪೇಂಟಿಂಗ್ಸ್ ಆಗಲ್ಲ, ಅದನ್ನು ಮಾಡಿ' ಅಂದ್ರು. ಮತ್ತೆ ಗೊಂದಲವಾಯ್ತು. ಪೋರ್ಟ್ರೇಟ್ ಬೇರೆ, ಪೇಂಟಿಂಗ್ಸ್ ಬೇರೆ, ಇವರೆಡೂ ಒಂದೇ ಆಗಲು ಸಾಧ್ಯವಿಲ್ಲವೇ ಅನ್ನಿಸಿತು. ಆಗ ಕೋಲ್ಕತ್ತಾದ ವಿಕಾಸ ಭಟ್ಟಾಚಾರ್ಯರ ಪುಸ್ತಕವೊಂದು ಸಿಕ್ತು. ಅದನ್ನು ಆಳವಾಗಿ ಅಧ್ಯಯನ ಮಾಡಿದೆ. ಪೋರ್ಟ್ರೇಟ್‌ಗಳು ಯಾವಾಗ ಪೇಂಟಿಂಗ್ ಆಗಿ ಬದಲಾಗುತ್ತವೆ ಎನ್ನುವುದು ತಿಳಿಯಿತು'.

'ನಾನು ಯಾರದೋ ಒಬ್ಬರ ಭಾವಚಿತ್ರ ಬರೆದರೆ ಅದು ಆ ವ್ಯಕ್ತಿಯದು ಮಾತ್ರವಾಗುತ್ತದೆ. ಅದೇ ಪೇಂಟಿಂಗ್ ಆಗಬೇಕಿದ್ರೆ ಅದು ನಮ್ಮ ನಡುವಿನ ಮುಖಗಳಾಗಬೇಕು, ಬದುಕಾಗಬೇಕು, ಇನ್ನೇನೋ ಹೇಳಬೇಕು, ಎಲ್ಲರದ್ದಾಗಬೇಕು. ಆ ಸಂದರ್ಭದಲ್ಲಿ ಕಲಾಕೃತಿಗಳಾಗಿ ಜನ್ಮ ತಳೆದವರು ನಮ್ಮ ನಡುವಿನ ಜೋಗತಿಯರು, ದುರುಮುರುಗಿಯರು, ಚರ್ಮವಾದ್ಯದವರು, ಹುಲಿ ವೇಷದವರು, ಬೇಡರು, ದೇವರನ್ನು ತಲೆ ಮೇಲೆ ಹೊತ್ತು ತಿರುಗುವವರು, ಗೋರವಪ್ಪನವರು, ಹಸಿದವರು, ಭಿಕ್ಷುಕಿಯರು, ಹಸಿದ ಕಂಗಳ ಭಿಕ್ಷೆ ಬೇಡುವ ಬಾಲಕರು... ಇವರೇ ನಮ್ಮ ನಡುವಿನ ಜೀವಂತ ಕಲಾಕೃತಿಗಳಾದರು. ಪ್ರತಿದಿನ ಕಣ್ಣಿಗೆ ಕಂಡ, ದೈನಿಕೊಂದಿಗೆ ಮಿಳಿತಗೊಂಡ ಇವರನ್ನು ಕ್ಯಾನ್ವಾಸ್ ಮೇಲೆ ಮೂಡಿಸುತ್ತ ಸಾಗಿದೆ. ಯಾವಾಗ ಇಂತಹ ಕೃತಿಗಳನ್ನು ಆರಂಭಿಸಿದೆನೋ ಅಲ್ಲಿಂದ ಹಿಂದಿರುಗಿ ನೋಡಲಿಲ್ಲ. ಎಲ್ಲೆಡೆಯಿಂದ ಮೆಚ್ಚುಗೆ ಹರಿದು ಬಂತು'.

'ನಾವು ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲರಾಗುತ್ತಿದ್ದಂತೆ ಸಮಾಜದ ಕೆಳವರ್ಗದವರನ್ನು, ದುರ್ಬಲರನ್ನು ಕೀಳಾಗಿ ಕಾಣುತ್ತೇವೆ. ಅವರಿಗೂ ಒಂದು ಬದುಕಿದೆ ಎನ್ನುವುದನ್ನು ಮರೆತುಬಿಡುತ್ತೇವೆ. ಕೆಳವರ್ಗದವರಿಗೂ ಕೂಡ ನಮ್ಮಂತೆ ಆಸೆ, ಕನಸುಗಳಿವೆ. ಅವರಿಗೂ ಬದುಕಿದೆ. ನಾನು ಎಲ್ಲಿ ಹೋದರೂ ಹುಡುಕುವುದು ದೀನ–ದಲಿತ ಮುಖಗಳನ್ನೇ'.

'ನನ್ನ ಚಿತ್ರಗಳಲ್ಲಿ ಬಹಳ ಢಾಳಾದ ವರ್ಣಸಂಯೋಜನೆಗಳಿರುತ್ತವೆ. ನೀಲಿ, ಕೆಂಪು, ಹಳದಿ ಹೀಗೆ. ಬಹಳಷ್ಟು ಜನರು ಈ ಬಗ್ಗೆಯೇ ಕೇಳುತ್ತಾರೆ. ಇದು 'ಇಂಪ್ರೆಷನಿಸಮ್' (impressionism) ಅಂತೇನೂ ಅಲ್ಲ. ನನಗೆ ಯಾವ 'ಇಸಂ'ಗಳೂ ಗೊತ್ತಿಲ್ಲ. ಬಡವರು, ದುರ್ಬಲರು, ಭಿಕ್ಷುಕರು, ಹಸಿದವರು ಧರಿಸುವುದು ಇಂತಹ ಗಾಢ ವರ್ಣದ ಬಟ್ಟೆಗಳನ್ನೇ ಅಲ್ಲವೇ? ಅವರ ಬಳಿ ಹೆಚ್ಚಿನ ಬಟ್ಟೆಗಳಿರುವುದಿಲ್ಲ. ಕೊಳೆ ಆದರೂ ಕಾಣದಿರಲಿ ಅಂತ ಅವರಿಗೆ ಆಸೆ... ಅವರು ಎಲ್ಲೇ ಬರುತ್ತಿದ್ದರೂ ಕಣ್ಣಿಗೆ ಬೀಳ್ತಾರೆ. ಬಹಳ ಬೇಗ ಈ ಬಣ್ಣಗಳು ಆಕರ್ಷಿಸುತ್ತವೆ'.

'ಹಲವರು ನನ್ನ ಚಿತ್ರಗಳನ್ನು ನೋಡಿ ಹಿರಿಯ ಕಲಾವಿದ ಕೆ.ಟಿ. ಶಿವಪ್ರಸಾದ್ ಅವರ ಚಿತ್ರಗಳಿಗೆ ಹೋಲಿಕೆ ಮಾಡುತ್ತಾರೆ. ಆದರೆ ನನ್ನ ಮೇಲೇನೂ ಅವರ ಚಿತ್ರಗಳು ಪ್ರಭಾವ ಬೀರಿಲ್ಲ. ಸ್ವತಃ ಶಿವಪ್ರಸಾದ್ ಅವರಿಂದಲೇ ಮೆಚ್ಚುಗೆಯ ಮಾತುಗಳನ್ನು ಕೇಳಿಸಿಕೊಂಡಿದ್ದೇನೆ'.

## ಮೊದಲ ಪ್ರದರ್ಶನದಲ್ಲಿ ₹2.5 ಲಕ್ಷ!

ನನ್ನ ಚಿತ್ರಗಳನ್ನು ನೋಡಿದವರು 'ಯಾರು ತಗೋತಾರೆ ಇಂತಹ ಭಿಕ್ಷುಕರ ಪೇಂಟಿಂಗ್ಸ್‌ಗಳನ್ನು' ಅಂತಿದ್ರು. 2010ರಲ್ಲಿ ಬೆಂಗಳೂರಿನಲ್ಲಿ ಮೊದಲ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದೆ. ಕಲಾ ಪ್ರದರ್ಶನ ಮುಗಿದಾಗ ಸುಮಾರು ₹2.50 ಲಕ್ಷ ಬೆಲೆಯ ಕಲಾಕೃತಿಗಳು ಮಾರಾಟವಾಗಿದ್ದವು'.

'ಇಲ್ಲಿನ ಜನ, ವಿದೇಶಿಯರು ನನ್ನ ಚಿತ್ರಗಳನ್ನು ಇಷ್ಟಪಟ್ಟರು. ಹೊರ ದೇಶದಲ್ಲಿ ವಾಸವಾಗಿರುವ ನಮ್ಮವರು ಈ ಚಿತ್ರಪ್ರದರ್ಶನ ಕಂಡಾಗ 'ನಮ್ಮೂರನ್ನೇ ತೋರಿಸಿದ್ರಿ ನೀವು' ಅಂತ ಬೆನ್ನುತಟ್ಟಿದರು. ಬೆಂಗಳೂರು, ಮುಂಬೈನಲ್ಲಿ ಬಹಳಷ್ಟು ಜನರು ತಮ್ಮ ಮಕ್ಕಳನ್ನು ಕರೆತಂದು ಈ ಚಿತ್ರಗಳನ್ನು ತೋರಿಸಿದರು. ಇಂತಹ ಬದುಕೂ ಇದೆ ಎಂದು ವಿವರಿಸುತ್ತಿದ್ದಾಗ ನನಗೆ ಖುಷಿ ಆಗೋದು'.

'ಬೆಂಗಳೂರು, ಕೋಲ್ಕತ್ತಾ, ಮುಂಬೈ, ಪುಣೆ, ದೆಹಲಿ ಮುಂತಾದ ಮಹಾನಗರಗಳಲ್ಲಿ ಪ್ರದರ್ಶನ ಮಾಡಿದ್ದೇನೆ. ಬಹಳಷ್ಟು ಕಲಾಕೃತಿಗಳು ಮಾರಾಟವಾಗಿವೆ. ಈಗ ಆನ್‌ಲೈನ್‌ನಲ್ಲಿ ಕಲಾಕೃತಿಗಳನ್ನು ಸೇಲ್ ಮಾಡುತ್ತಿದ್ದೇನೆ. ಈಗೊಂದು 3–4 ತಿಂಗಳಿನಿಂದ ಸಲೂನ್ ಕೆಲಸ ಬಿಟ್ಟಿದ್ದೇನೆ. ಪೂರ್ಣಾವಧಿ ಕಲಾವಿದನಾಗಿದ್ದೇನೆ'.

'ಅಷ್ಟಕ್ಕೂ ನನಗೆ ನನ್ನೆಲ್ಲ ಕಲಾಕೃತಿಗಳು ಮಾರಾಟವಾಗಬೇಕು ಅಂತೇನೂ ಇಲ್ಲ. ನನ್ನ ಕಲಾಕೃತಿಗಳು ನನ್ನ ಆಸ್ತಿ. ಹೀಗಾಗಿ ಅವನ್ನೆಲ್ಲ ನನ್ನ ಗ್ಯಾಲರಿಯಲ್ಲಿಯೇ ಕಾಪಿಟ್ಟು, ಮ್ಯೂಸಿಯಂ ಮಾಡುತ್ತೇನೆ. ಮುಂದಿನ ತಲೆಮಾರು ಇವುಗಳನ್ನು ಟಿಕೆಟ್ ಕೊಟ್ಟು ನೋಡುವಂತೆ ಮಾಡಬೇಕು ಎನ್ನುವ ಕನಸಿದೆ'.

***

'ಶಂಕರ್ ಅವರೊಂದಿಗಿನ ಭೇಟಿ–ಮಾತು ಒಂದು ಜೀವಂತ ಗ್ಯಾಲರಿಯೊಳಗೆ ಹೊಕ್ಕು ರಸಾಸ್ವಾದ ಮಾಡಿಬಂದ ಅನುಭವ ನೀಡುತ್ತದೆ. ಏಕೆಂದರೆ, ಅವರ ಕಲೆ ಹೊರಜಗತ್ತಿನಿಂದ ಪ್ರೇರಿತವಾದುದಲ್ಲ. ಅದು ಬದುಕಿನಿಂದ ರೂಪುಗೊಂಡಿದ್ದು, ಬದುಕೇ ಕಲೆಯಾಗಿ ಅರಳಿರುವಂತಹದ್ದು'. ■